2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 34/2024</u>

| | | |
|---|---|---|
| ಸಾಕ್ಷಿದಾರರ ಹೆಸರು | - ಕರುಂಬಯ್ಯ | ಪಿಡಬ್ಲೂ -01 |
| ತಂದೆಯ ಹೆಸರು | - ಬಿ.ಕೆ.ಅಪ್ಪಣ್ಣ | ಸಿಡಬ್ಲೂ -01 |
| ವಯಸ್ಸು | - 39 ವರ್ಷ | |
| ಉದ್ಯೋಗ | - ಮ್ಯಾನೇಜರ್, ಗಬ್ಗಲ್ ಎಸ್ಟೇಟ್ | |
| ವಾಸ ಸ್ಥಳ | - ಗಬ್ಗಲ್ ಎಸ್ಟೇಟ್ | |

ದಿನಾಂಕಃ 03.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು ಕಳೆದ ಎರಡು ವರ್ಷಗಳಿಂದ ಕೊಟ್ಟಿಗೆಹಾರ ಬಾಳೆಹೊನ್ನೂರು ಬಳಿ ಇರುವ ಗಬ್ಗಲ್ ಎಸ್ಟೇಟಿನಲ್ಲಿ ಮ್ಯಾನೇಜರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ಗಬ್ಗಲ್ ಎಸ್ಟೇಟ್ ಟಾಟಾ ಸಂಸ್ಥೆಗೆ ಸೇರಿರುತ್ತದೆ. ವಿಸಿ ಮೂಲಕ ಹಾಜರುಪಡಿಸಿರುವ ಆರೋಪಿತರು ಗಬ್ಗಲ್ ಎಸ್ಟೇಟಿನಲ್ಲಿ ಕೂಲಿ ಕೆಲಸಕ್ಕೆ ನಾನು ಬಂದ ಒಂದು ವರ್ಷದಿಂದ ಇದ್ದರು. ಆರೋಪಿತರು ಜಾರ್ಕಂಡ್ ರಾಜ್ಯದ ಮೂಲದವರು. ಆರೋಪಿತರು ಗಂಡ ಹೆಂಡತಿ ಎಂದು ನನಗೆ ತಿಳಿದಿರುತ್ತದೆ. ಆರೋಪಿತರು ಒಂದು ಗಂಡು ಮಗುವಿನ ಜೊತೆ ಕೆಲಸಕ್ಕೆ ಬಂದಿದ್ದರು. ಚಾಸಾ.2 ಮತ್ತು 3 ರವರು ಅದೇ ಎಸ್ಟೇಟಿನಲ್ಲಿ ಸೂಪರ್ ವೈಸರ್ ಕೆಲಸ ಮಾಡುತ್ತಾರೆ. ಚಾಸಾ.5 ನಮ್ಮ ಎಸ್ಟೇಟಿನಲ್ಲಿ ಖಾಯಂ ಕೂಲಿ ಕೆಲಸ ಮಾಡುತ್ತಾರೆ. ಚಾಸಾ.8 ನಮ್ಮ ಎಸ್ಟೇಟಿನ ಸಿಬ್ಬಂದಿಯಾಗಿರುತ್ತಾರೆ.
3. ನಾನು ಕೆಲಸಕ್ಕೆ ಬಂದಾಗ ಎಸ್ಟೇಟಿನಲ್ಲಿ ಸುಮಾರು 30 ರಿಂದ 35 ಜನ ಖಾಯಂ ಕೂಲಿ ಕೆಲಸಗಾರರಿದ್ದರು ಹಾಗೂ 150 ಇತರೆ

ಕೆಲಸಗಾರರು ಇದ್ದರು. ಅಸ್ಸಾಂ ಮತ್ತು ಜಾರ್ಕಂಡ್ ರಾಜ್ಯದಿಂದ ಬಂದ ಕೂಲಿ ಕೆಲಸಗಾರರು ಎಸ್ಟೇಟಿನ ಕೂಲಿ ಲೈನಿನಲ್ಲಿ ವಾಸವಿರುತ್ತಾರೆ.

4. ದಿಃ 18.12.2023 ರಂದು ನಾನು ಎಸ್ಟೇಟಿನಲ್ಲಿ ಇರಿಗೇಶನ್ ಟ್ಯಾಂಕ್ ಬಳಿ ಕೆಲಸವನ್ನು ನೋಡುತ್ತಿರುವಾಗ ಸುಮಾರು ಮಧ್ಯಾಹ್ನ 3.45 ಗಂಟೆಗೆ ಚಾಸಾ.8 ರವರು ನನಗೆ ದೂರವಾಣಿ ಕರೆ ಮಾಡಿ ಆರೋಪಿತರ ಮಗು ಶಿವಕುಮಾರ ಈತನ ಪ್ರಜ್ಞೆ ತಪ್ಪಿದೆ ಎಂದು ತಿಳಿಸಿದರು. ತಕ್ಷಣ ನಾನು ಎಸ್ಟೇಟಿನ ಜೀಪಿನಲ್ಲಿ ಕೂಲಿ ಲೈನಿಗೆ ಹೋದೆ. ಆದರೆ ನಾನು ಹೋಗುವ ಮೊದಲು ಮಗುವನ್ನು ನಿಡುವಾಳೆ ಪಿ.ಹೆಚ್.ಸಿ. ಗೆ ಕರೆದುಕೊಂಡು ಹೋಗಿದ್ದರು. ನಂತರ ನಾವು ಜೀಪಿನಲ್ಲಿ ನಿಡುವಾಳೆ ಪಿ.ಹೆಚ್.ಸಿ.ಗೆ ಹೋದಾಗ ಚಾಸಾ.8, ಚಾಸಾ.3, ಚಾಸಾ.2, ಆರೋಪಿತರು ಮತ್ತು ಶಿವಕುಮಾರ ಇದ್ದರು.

5. ಅಲ್ಲಿ ವೈದ್ಯರು ಮೂಡಿಗೆರೆ ಆಸ್ಪತ್ರೆಗೆ ಶಿವಕುಮಾರನನ್ನು ಕರೆದುಕೊಂಡು ಹೋಗಲು ಸೂಚಿಸಿದ್ದರು. ಅದರಂತೆ ಶಿವಕುಮಾರನನ್ನು ಮೂಡಿಗೆರೆ ಆಸ್ಪತ್ರೆಗೆ ಚಾಸಾ.2, 3, 4 ಹಾಗೂ ಆರೋಪಿತರು ನಮ್ಮ ಜೀಪಿನಲ್ಲಿ ಕರೆದುಕೊಂಡು ಹೋದರು. ಅದೇ ದಿನ ಸಂಜೆ 5.00 ಗಂಟೆಗೆ ಮಗುವಿನ ಜೀವ ಇಲ್ಲ ಎಂದು ಚಾಸಾ.2 ಮತ್ತು 3 ರವರು ಪೋನಿನ ಮೂಲಕ ನನಗೆ ತಿಳಿಸಿದರು.

6. ಈ ವಿಚಾರವನ್ನು ನನ್ನ ಸಂಸ್ಥೆಯವರಿಗೆ ದೂರವಾಣಿ ಮೂಲಕ ತಿಳಿಸಿರುತ್ತೇನೆ. ಮರುದಿನ ದಿಃ 19.12.2023 ರಂದು ಬಾಳೂರು ಪೋಲೀಸ್ ಠಾಣೆಗೆ ಹೋಗಿ ಶಿವಕುಮಾರ ಎಂಬ ಮಗು ತೀರಿಹೋಗಿದೆ, ಆತನ ಮರಣದ ಕಾರಣವನ್ನು ಪತ್ತೆ ಮಾಡಲು

ದೂರು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಈ ಕುರಿತು ಯು.ಡಿ.ಆರ್. ಪ್ರಕರಣ ದಾಖಲಿಸಲಾಯಿತು.

7. ಘಟನೆ ನಡೆದ ಒಂದು ತಿಂಗಳ ನಂತರ ಮೂಡಿಗೆರೆ ಪೋಲೀಸ್ ಠಾಣೆಗೆ ಹೋಗಿ ಆರೋಪಿತರು ನಮ್ಮ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡುತ್ತಿರುವ ಬಗ್ಗೆ ಡಿಸೆಂಬರ್ 2023 ಮಾಹೆಯ ಹಾಜರಾತಿ ಪುಸ್ತಕ, ಆರೋಪಿತರು ವಾಸಿಸುತ್ತಿದ್ದ ಮನೆಯ ವಿದ್ಯುಚ್ಛಕ್ತಿ ಬಿಲ್ ಮತ್ತು ನಮ್ಮ ಎಸ್ಟೇಟಿನ ಪಹಣಿಯನ್ನು ಪತ್ರದೊಂದಿಗೆ ಲಗತ್ತಿಸಿ ಕೊಟ್ಟಿರುತ್ತೇನೆ. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ನಾನು ನೀಡಿದ ಪತ್ರವನ್ನು ನಿಪಿ.3 ಎಂದು, ಡಿಸೆಂಬರ್ 2023 ಮಾಹೆಯ ಹಾಜರಾತಿ ಪುಸ್ತಕವನ್ನು ನಿಪಿ.4 ಎಂದು, ವಿದ್ಯುಚ್ಛಕ್ತಿ ಬಿಲ್ಲನು ನಿಪಿ.5, ಎಂದು ಪಹಣಿಯನ್ನು ನಿಪಿ.6 ಎಂದು ಗುರುತಿಸಲಾಯಿತು.

8. ನಾನು ಹಾಜರಾತಿ ಪುಸ್ತಕವನ್ನು ಪ್ರತಿ ತಿಂಗಳ ಕೊನೆಯಲ್ಲಿ ಪರಿಶೀಲಿಸುತ್ತೇನೆ. ಕೂಲಿ ಕೆಲಸಗಾರರು ಕೆಲಸಕ್ಕೆ ಹಾಜರಾದಾಗ ಅದನ್ನು ಮಸ್ಟರ್ ರೋಲಿನಲಿ ನಮೂದಿಸಲಾಗುತ್ತದೆ ಹಾಗೂ ಕೆಲಸ ಮುಗಿಸಿ ಅವರು ಹೋಗುವಾಗ ಅದನ್ನು ಆರ್.ಎಫ್.ಐ.ಡಿ. ಕಾರ್ಡಿನಲ್ಲಿ ನಮೂದಿಸಲಾಗುತ್ತದೆ.

9. ಡಿಸೆಂಬರ್ 2023 ರಲ್ಲಿ ಎರಡು ಸಲ ನಾನು ಬಾಳೂರು ಪೋಲೀಸ್ ಠಾಣೆಗೆ ವಿಚಾರಣೆಗೆ ಹೋಗಿರುತ್ತೇನೆ. ನಾನು ದೂರನ್ನು ಸಲ್ಲಿಸಿ ಬಂದ ನಂತರ ಚಾಸಾ.5 ರವರಿಂದ ಮಗುವಿನ ಬಗ್ಗೆ ವಿಚಾರಿಸಿರುತ್ತೇನೆ. ಆಗ ಅವರು ದಿಃ 18.12.2023 ರಂದು

ಮದಾಹ್ನ 1.45 ಗಂಟೆಗೆ ಆರೋಪಿತರಿಬ್ಬರು ಮಗುವನ್ನು ಹುಡುಕುತ್ತಿದ್ದರು ಎಂದು ನನಗೆ ದಿಃ 19.12.2023 ರಂದು ಚಾಸಾ.5 ರವರು ತಿಳಿಸಿದರು. ಆ ದಿನ ಮಗುವನ್ನು 1 ನೇ ಆರೋಪಿ ಕರೆದುಕೊಂಡು ಬರುತ್ತಿದ್ದ ಎಂದು, ಮಗು ಹೆದರಿದ ಹಾಗೇ ಕಾಣುತ್ತಿತ್ತು ಹಾಗೂ ಬಾಯಿಯಲ್ಲಿ ನೊರೆ ಬರುತ್ತಿರುವುದಾಗಿ ಹಾಗೂ ಮಗುವು ಮಲವಿಸರ್ಜನೆ ಮಾಡಿಕೊಂಡಿದ್ದಾಗಿ, ನಂತರ 2 ನೇ ಆರೋಪಿ ಮಗುವನ್ನು ಸ್ವಚ್ಛ ಗೋಳಿಸಿ ಮಗುವಿನ ಬಟ್ಟೆ ಬದಲಾಯಿಸಿ, 1 ನೇ ಆರೋಪಿ ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೊಗುವುದಾಗಿ ತಿಳಿಸಿ ಕರೆದುಕೊಂಡು ಹೋದನೆಂದು ಚಾಸಾ.5 ರವರು ತಿಳಿಸಿದರು.

10. ಚಾಸಾ.5 ರವರು ತಿಳಿಸಿದ ಮಾಹಿತಿಯನ್ನು ದಿಃ 21.12.2023 ಮತ್ತು ದಿಃ 22.12.2023 ರಂದು ನಾನು ಪೋಲೀಸರಿಗೆ ತಿಳಿಸಿ ಹೇಳಿಕೆ ನೀಡಿರುತ್ತೇನೆ.

11. ಆರೋಪಿತರಿಬ್ಬರು ಮಗುವನ್ನು ಕುತ್ತಿಗೆ ಹಿಚುಕಿ ಸಾಯಿಸಿರುತ್ತಾರೆ ಎಂದು ಪೋಲೀಸರು ನನಗೆ ತಿಳಿಸಿರುತ್ತಾರೆ. ಆರೋಪಿತರಿಬ್ಬರು ಗಂಡ ಹೆಂಡತಿ ಅಲ್ಲ ಹಾಗೂ ಮಗು 2 ನೇ ಆರೋಪಿಯ ಮೊದಲನೇ ಗಂಡನ ಮಗು ಎಂದು ನನಗೆ ಆನಂತರ ತಿಳಿದುಬಂದಿರುತ್ತದೆ. ಮೃತನಾದ ಶಿವಕುಮಾರನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರದಲ್ಲಿ ಮೃತ ಶಿವಕುಮಾರನನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.7 ರಿಂದ 10 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಶ್ರೀ ಎನ್.ಡಿ.(ಎಲ್.ಎ.ಡಿ.ಸಿ.ಎಸ್.) ವಕೀಲರಿಂದ ಆರೋಪಿತರ ಪರವಾಗಿ</u>

12. ಚಾಸಾ.8 ರವರು ನನಗೆ ಪೋನು ಮಾಡಿದಾಗ ಸುಮಾರು ಮದ್ಯಾಹ್ನ 3.45 ಆಗಿತ್ತು. ಚಾಸಾ.8 ರವರ ದೂರವಾಣಿ ಸಂಖ್ಯೆಯನ್ನು ಪೋಲೀಸರಿಗೆ ನೀಡಿಲ್ಲ ಕಾರಣ ಪೋಲೀಸರು ನನ್ನನ್ನು ಕೇಳಿರುವುದಿಲ್ಲ. ನಾನು ಇದ್ದ ಸ್ಥಳದಿಂದ ಕೂವೆ ವಿಭಾಗ ಸುಮಾರು 5-6 ಕಿಮೀ ಅಂತರದಲ್ಲಿದೆ.

13. ನಿಡುವಾಳೆಯಲ್ಲಿ ನಾನು ಮಗುವನ್ನು ನೋಡಿದ್ದೇನೆ. ನಾನು ಮಗುವಿನ ಬಲಕೈ ಮುಟ್ಟಿ ನೋಡಿದ್ದೇನೆ, ಬಲಕ್ಕೆಗೆ ಸ್ವಲ್ಪ ಗಾಯವಾಗಿದ್ದು ಕಂಡುಬಂದಿರುತ್ತದೆ. ಮಗುವಿನ ದೇಹ ತಣ್ಣಗಿತ್ತೊ ಅಥವ ಉಷ್ಣವಾಗಿತ್ತೊ ಎಂದು ನಾನು ಸರಿಯಾಗಿ ಗಮನಿಸಿಲ್ಲ. ನಿಡುವಾಳೆ ಪಿ.ಹೆಚ್.ಸಿ.ಯಲ್ಲಿ ಮಗುವನ್ನು ದಾಖಲು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಿಡುವಾಳೆಯಲ್ಲಿ ಖಾಸಗಿ ಕ್ಲಿನಿಕ್ ಗಳು ಇವೆ ಎಂದರೆ ಗೊತ್ತಿಲ್ಲ. ಬಣಕಲ್ ನಲ್ಲಿಯೂ ಸಹ ಖಾಸಗಿ ಕ್ಲಿನಿಕ್ ಗಳು ಇವೆ ಎಂದರೆ ಸರಿ.

14. ಮಗು ತೀರಿಕೊಂಡ ವಿಷಯ ಗೊತ್ತಾದ ತಕ್ಷಣ ಬಾಳೂರು ಪೋಲೀಸರಿಗೆ ವಿಷಯ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ಮೇಲಾಧಿಕಾರಿಗಳ ಸೂಚನೆ ಮೇರೆಗೆ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಬಾಳೂರಿನಲ್ಲಿ ಠಾಣೆಯ ಪಕ್ಕ ಟೈಪ್ ಮಾಡಿಸಲಾಗಿದೆ. ನಾನು ಠಾಣೆಗೆ ಹೋದಾಗ ಬೆಳಿಗ್ಗೆ 6.30 ರಿಂದ 7.00 ಗಂಟೆ ಮದ್ಯೆ ತಲುಪಿರುತ್ತೇನೆ. ಸಾಮಾನ್ಯವಾಗಿ ಬೆರಳಚ್ಚುಗಾರರು 9.00 ಗಂಟೆ ನಂತರ ಕೆಲಸಕ್ಕೆ ಬರುತ್ತಾರೆ ಎಂದರೆ ಇರಬಹುದು. ನಮ್ಮ ಎಸ್ಟೇಟಿನಲ್ಲಿ ಡಿಸ್ಪೆನ್ಸರಿ ಇದೆ ಎಂದರೆ ಸರಿ. ಅದು ಕೂವೆಯಿಂದ

ಸುಮಾರು 6 ಕಿಮೀ ದೂರದಲ್ಲಿದೆ. ಡಿಸ್ಪೆನ್ಸರಿಯಲ್ಲಿ ಒಬ್ಬರು ನರ್ಸ್ ಮಾತ್ರ ಇದ್ದಾರೆ.

15. ಕಾರ್ಮಿಕರ ಕೆಲಸದ ಅವಧಿ ಬೆಳಿಗ್ಗೆ 7.30 ರಿಂದ 12.30 ಹಾಗೂ ಮದ್ಯಾಹ್ನ 1.30 ರಿಂದ 4.30 ಇರುತ್ತದೆ. ಒಂದು ಸಲ ಮಾತ್ರ ಹಾಜರಾತಿಯನ್ನು ಪಡೆಯಲಾಗುತ್ತದೆ.

16. ದಿಃ 18.12.2023 ರಂದು 2 ನೇ ಆರೋಪಿ ಕೆಲಸಕ್ಕೆ ಹಾಜರಾಗಿರುತ್ತಾರೆ ಎಂದರೆ ಸರಿ. ನಿಪಿ.4 ನ್ನು ಆರೋಪಿತರಿಗೆ ಸಂಬಂಧಪಟ್ಟಂತೆ ಮಾತ್ರ ಹಾಜರುಪಡಿಸಿರುತ್ತೇನೆ ಎಂದರೆ ಕೂವೆ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಹಾಜರಾತಿಯನ್ನು ಹಾಜರು ಪಡಿಸಿರುತ್ತೇನೆ. ಕೂವೆ ಗ್ಯಾಂಗಿನಲ್ಲಿ ಸುಮಾರು 20 ರಿಂದ 22 ಜನ ಕಾರ್ಮಿಕರು ಇದ್ದರು. ನಿಪಿ.4 ರಲ್ಲಿ 25 ಜನ ಹಾಜರಾತಿ ಇದೆ ಎಂದರೆ ಸರಿ.

17. ನಮ್ಮ ಎಸ್ಟೇಟಿನಲ್ಲಿ ಸಣ್ಣ ಮಕ್ಕಳನ್ನು ನೋಡಿಕೊಳ್ಳಲು ಕೂವೆಯಲ್ಲಿ ಒಬ್ಬರು ಮಾತ್ರ ದಾದಿಯಾಗಿ ನೇಮಿಸಿದ್ದೇವೆ. ಕೂವೆಯಲ್ಲಿ ದಾದಿಯಾಗಿ 2 ನೇ ಆರೋಪಿಯನ್ನು ನೇಮಿಸಲಾಗಿತ್ತು. ನಿಪಿ.5 ಟಾಟಾ ಕಂಪನಿಗೆ ಸಂಬಂಧಪಟ್ಟ ಬಿಲ್ ಅಲ್ಲ ಎಂದರೆ ಸರಿಯಲ್ಲ. ಕೂವೆಯಲ್ಲಿ ಸುಮಾರು 18 ಕೂಲಿ ಲೈನ್ ಗಳಿವೆ. ಎಲ್ಲಾ 18 ಲೈನಗಳಲ್ಲಿ ಕೂಲಿ ಕಾರ್ಮಿಕರು ವಾಸಿಸುತ್ತಾರೆ ಎಂದರೆ ಸರಿ. ಕಾರ್ಮಿಕರ ಕೂಲಿ ಲೈನಿನಲ್ಲಿ ಕೆಲವೊಮ್ಮೆ ಜಗಳ ಆಗುವುದು ನನ್ನ ಗಮನಕ್ಕೆ ಬರುತ್ತದೆ ಎಂದರೆ ಕೆಲವೊಮ್ಮೆ ಬರುತ್ತದೆ ಕೆಲವೊಮ್ಮೆ ಬುರವುದಿಲ್ಲ. ಗಲಾಟೆಯಾದ ಬಗ್ಗೆ ಠಾಣೆಯಲ್ಲಿ ಪ್ರಕರಣ ದಾಖಲಾದ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿಯಲ್ಲ.

18. ನಮ್ಮ ಎಸ್ಟೇಟಿನಲ್ಲಿ ಜಾರ್ಕಂಡ್ ರಾಜ್ಯಕ್ಕೆ ಸಂಬಂಧಿಸಿದವರು ಕೂವೆಯಲ್ಲಿ 32 ಜನ ಮತ್ತು ಗಬ್ಗಲ್ ನಲ್ಲಿ 25 ಜನ ಇರುತ್ತಾರೆ. ಎಲ್ಲರೂ ಅಕ್ಕಪಕ್ಕದಲ್ಲಿ ವಾಸಿಸುತ್ತಾರೆ ಎಂದರೆ ಸರಿ.

19. ಆರೋಪಿತರಿಬ್ಬರು ಗಂಡ ಹೆಂಡತಿ ಎಂದರೆ ಸರಿಯಲ್ಲ. ಮೃತ ಶಿವಕುಮಾರ ಅವರಿಬ್ಬರ ಮಗು ಎಂದರೆ ಸರಿಯಲ್ಲ.

20. ನಮ್ಮ ಎಸ್ಟೇಟಿನಲ್ಲಿ ಕೂಲಿ ಕೆಲಸಕ್ಕೆ ಬರುವವರ ಆಧಾರ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಪ್ರತಿ, ಪೋಟೋ ಪಡೆಯುತ್ತೇವೆ. 2 ನೇ ಆರೋಪಿಯು ತನ್ನ ಕೆಲಸವನ್ನು ನಿಯತ್ತಿನಿಂದ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಘಟನೆಯಾದ ವಿಚಾರ ಗೊತ್ತಾಗುವವರೆಗೂ ಮಾಡಿಕೊಂಡು ಬಂದಿರುತ್ತಾರೆ ಆದರೆ ಘಟನೆಯಾದ ನಂತರ ಅವರ ಮೇಲೆ ಸಂಶಯ ಬಂತು.

21. ದಿಃ 18.12.2023 ರಂದು 1 ನೇ ಆರೋಪಿ ಕೆಲಸಕ್ಕೆ ಹಾಜರಾಗಿರಲಿಲ್ಲ ಎಂದರೆ ಸರಿ. ಅವತ್ತಿನ ದಿನ 1 ನೇ ಆರೋಪಿ ಎಸ್ಟೇಟಿನಲ್ಲಿರಲಿಲ್ಲ ಎಂದರೆ ಸರಿ. ಆರೋಪಿತರಿಬ್ಬರು ಮಗುವಿನ ಕುತ್ತಿಗೆ ಹಿಚುಕಿ ಸಾಯಿಸಿದ್ದಾಗಿ ನನಗೆ ತಿಳಿದುಬಂದಿಲ್ಲ ಎಂದರೆ ಸರಿಯಲ್ಲ. ಈ ರೀತಿಯಾಗಿ ಘಟನೆ ನಡೆದಿದೆ ಎಂದು ನನಗೆ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ.

22. ಮಗುವನ್ನು ನಿಡುವಾಳೆಯ ಖಾಸಗಿ ಕ್ಲಿನಿಕ್ ನಲ್ಲಿ ಚಿಕಿತ್ಸೆಗೆ ಕರೆದುಕೊಂಡು ಹೋದ ಬಗ್ಗೆ ಗೊತ್ತಿದೆ ಎಂದರೆ ನನಗೆ ಈ ಬಗ್ಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಮಗುವಿಗೆ ಬಣಕಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಲಾಗಿದೆ ಎಂದರೆ ಈ ಬಗ್ಗೆ ಮಾಹಿತಿ ಇಲ್ಲ.

23. 2 ನೇ ಆರೋಪಿಯು ಎಲ್ಲಾ ಮಕ್ಕಳಿಗೆ ಊಟ ಕೊಟ್ಟು ಮಲಗಿಸಿ ಸ್ನಾನಕ್ಕೆ ಹೋಗಿದ್ದು ಮಗು ಶಿವಕುಮಾರ್ ಗೆ ಏನಾಯಿತು ಎಂದು ಅವರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ.5 ಮತ್ತು 8 ರವರು ನನಗೆ ಘಟನೆ ಬಗ್ಗೆ ಯಾವುದೇ ವಿಷಯವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ಈ ಘಟನೆಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

24. ದಿಃ 18.12.2023 ರಂದು ನಾನು ಎಸ್ಟೇಟಿನಲ್ಲಿ ಇರಿಗೇಶನ್ ಟ್ಯಾಂಕ್ ಬಳಿ ಕೆಲಸವನ್ನು ನೋಡುತ್ತಿರುವಾಗ ಸುಮಾರು ಮದ್ಯಾಹ್ನ 3.45 ಗಂಟೆಗೆ ಚಾಸಾ.8 ರವರು ನನಗೆ ದೂರವಾಣಿ ಕರೆ ಮಾಡಿ ಆರೋಪಿತರ ಮಗು ಶಿವಕುಮಾರ ಈತನ ಪ್ರಜ್ಞೆ ತಪ್ಪಿದೆ ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ. ತಕ್ಷಣ ನಾನು ಎಸ್ಟೇಟಿನ ಜೀಪಿನಲ್ಲಿ ಕೂಲಿ ಲೈನಿಗೆ ಹೋದೆ ಎಂದರೆ ಸರಿಯಲ್ಲ. ಆದರೆ ನಾನು ಹೋಗುವ ಮೊದಲು ಮಗುವನ್ನು ನಿಡುವಾಳೆ ಪಿ.ಹೆಚ್.ಸಿ. ಗೆ ಕರೆದುಕೊಂಡು ಹೋಗಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ನಾವು ಜೀಪಿನಲ್ಲಿ ನಿಡುವಾಳೆ ಪಿ.ಹೆಚ್.ಸಿ.ಗೆ ಹೋದಾಗ ಚಾಸಾ.8, ಚಾಸಾ.3, ಚಾಸಾ.2, ಆರೋಪಿತರು ಮತ್ತು ಶಿವಕುಮಾರ ಇದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

25. ಅಲ್ಲಿ ವೈದ್ಯರು ಮೂಡಿಗೆರೆ ಆಸ್ಪತ್ರೆಗೆ ಶಿವಕುಮಾರನನ್ನು ಕರೆದುಕೊಂಡು ಹೋಗಲು ಸೂಚಿಸಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅದರಂತೆ ಶಿವಕುಮಾರನನ್ನು ಮೂಡಿಗೆರೆ ಆಸ್ಪತ್ರೆಗೆ ಚಾಸಾ.2, 3, 4 ಹಾಗೂ ಆರೋಪಿತರು ನಮ್ಮ ಜೀಪಿನಲ್ಲಿ ಕರೆದುಕೊಂಡು ಹೋದರು ಎನ್ನುವುದು ಸುಳ್ಳು ಎಂದರೆ

ಸರಿಯಲ್ಲ. ಅದೇ ದಿನ ಸಂಜೆ 5.00 ಗಂಟೆಗೆ ಮಗುವಿನ ಜೀವ ಇಲ್ಲ ಎಂದು ಚಾಸಾ.2 ಮತ್ತು 3 ರವರು ಪೋನಿನ ಮೂಲಕ ನನಗೆ ತಿಳಿಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

26. ಡಿಸೆಂಬರ್ 2023 ರಲ್ಲಿ ಎರಡು ಸಲ ನಾನು ಬಾಳೂರು ಪೋಲೀಸ್ ಠಾಣೆಗೆ ವಿಚಾರಣೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರನ್ನು ಸಲ್ಲಿಸಿ ಬಂದ ನಂತರ ಚಾಸಾ.5 ರವರಿಂದ ಮಗುವಿನ ಬಗ್ಗೆ ವಿಚಾರಿಸಿರುತ್ತೇನೆ ಆಗ ಅವರು ದಿಃ 18.12.2023 ರಂದು ಮದಾಹ್ನ 1.45 ಗಂಟೆಗೆ ಆರೋಪಿತರಿಬ್ಬರು ಮಗುವನ್ನು ಹುಡುಕುತ್ತಿದ್ದರು ಎಂದು ನನಗೆ ದಿಃ 19.12.2023 ರಂದು ಚಾಸಾ.5 ರವರು ತಿಳಿಸಿದರು ಎಂದರೆ ಸರಿಯಲ್ಲ. ಆ ದಿನ ಮಗುವನ್ನು 1 ನೇ ಆರೋಪಿ ಕರೆದುಕೊಂಡು ಬರುತ್ತಿದ್ದ ಎಂದು, ಮಗು ಹೆದರಿದ ಹಾಗೇ ಕಾಣುತ್ತಿತ್ತು ಹಾಗೂ ಬಾಯಿಯಲ್ಲಿ ನೊರೆ ಬರುತ್ತಿರುವುದಾಗಿ ಹಾಗೂ ಮಗುವು ಮಲವಿಸರ್ಜನೆ ಮಾಡಿಕೊಂಡಿದ್ದಾಗಿ, ನಂತರ 2 ನೇ ಆರೋಪಿ ಮಗುವನ್ನು ಸ್ವಚ್ಚ ಗೋಳಿಸಿ ಮಗುವಿನ ಬಟ್ಟೆ ಬದಲಾಯಿಸಿ, 1 ನೇ ಆರೋಪಿ ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೊಗುವುದಾಗಿ ತಿಳಿಸಿ ಕರೆದುಕೊಂಡು ಹೋದನೆಂದು ಚಾಸಾ.5 ರವರು ತಿಳಿಸಿದರು ಎಂದರೆ ಸರಿಯಲ್ಲ.

27. ಆರೋಪಿತರಿಬ್ಬರು ಮಗುವನ್ನು ಕುತ್ತಿಗೆ ಹಿಚುಕಿ ಸಾಯಿಸಿರುತ್ತಾರೆ ಎಂದು ಪೋಲೀಸರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಬ್ಬರು ಗಂಡ ಹೆಂಡತಿ ಅಲ್ಲ ಹಾಗೂ ಮಗು 2 ನೇ ಆರೋಪಿಯ ಮೊದಲನೇ ಗಂಡನ ಮಗು ಎಂದು ನನಗೆ ಆನಂತರ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ.

28. ನಮ್ಮ ಎಸ್ಟೇಟಿನಲ್ಲಿ ಯಾರಾದರೂ ತೀರಿಹೋದರೆ ಅವರಿಗೆ ಪರಿಹಾರವನ್ನು ಸಂಸ್ಥೆಯವರು ಕೊಡಬೇಕಾಗುತ್ತದೆ ಎಂದರೆ ಸರಿ. ಸದರಿ ಪರಿಹಾರವನು ಕೊಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವ್ಯವಸ್ಥಾಪಕನಾಗಿರುವುದರಿಂದ ಎಸ್ಟೇಟಿನಲ್ಲಿ ಏನೇನೂ ನಡೆಯುತ್ತದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

(ಆರೋಪಿತರ ಪರ ವಕೀಲರು ಸಾಕ್ಷಿಯ ವಿಚಾರಣೆಯನ್ನು ಆರೋಪಿತರಿಗೆ ಅವರಿಗೆ ತಿಳಿದ ಭಾಷೆಯಲ್ಲಿ ತರ್ಜುಮೆ ಮಾಡಿ ತಿಳಿಸುವುದಾಗಿ ಒಪ್ಪಿರುತ್ತಾರೆ)

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಗುರುಪ್ರಸಾದ ಕುಲಕರ್ಣಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ